RNU AIR DHARWAD

NOVEMBER 22, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ಕಲಬುರಗಿ ಜಿಲ್ಲೆಯನ್ನು, ಕಲ್ಯಾಣ ಕರ್ನಾಟಕದ, ಆರೋಗ್ಯ ತಾಣವಾಗಿ ರೂಪಿಸಲು, ರಾಜ್ಯ ಸರ್ಕಾರದ, ಯೋಜನೆ.**

**ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ, ರಾಷ್ಟ್ರೀಯ ಪ್ರಶಸ್ತಿಗಳ ಗರಿ.**

**ಪಿಂಚಣಿದಾರರ, ಡಿಜಿಟಲ್ ಜೀವಿತ ಪ್ರಮಾಣ ಪತ್ರ ಅಭಿಯಾನ; ಈ ತಿಂಗಳ 30ರ ವರೆಗೆ ಸಲ್ಲಿಕೆಗೆ, ಅವಕಾಶ.**

**ಸರ್ದಾರ ಪಟೇಲರ 150ನೇ ಜಯಂತ್ಯುತ್ಸವ; ಶಿವಮೊಗ್ಗದಲ್ಲಿ ಏಕತಾ ನಡಿಗೆ ಯಶಸ್ವಿ.**

<><><>

**ಈಗ ವಾರ್ತೆಗಳ ವಿವರ**

<><><>

**ಆರೋಗ್ಯ ವ್ಯವಸ್ಥೆ ಬಲಪಡಿಸಿ, ಸಮುದಾಯ ಆಧಾರಿತ, ಆರೋಗ್ಯ ಸಂಸ್ಥೆಗಳನ್ನು ಉನ್ನತೀಕರಿಸುವ ಚಿಂತನೆ, ರಾಜ್ಯ ಸರ್ಕಾರ ಹೊಂದಿದೆ ಎಂದು, ವೈದ್ಯಕೀಯ ಶಿಕ್ಷಣ ಖಾತೆ ಸಚಿವ ಶರಣಪ್ರಕಾಶ ಪಾಟೀಲ ತಿಳಿಸಿದ್ದಾರೆ. ಕಲಬುರಗಿಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ಆಸ್ಪತ್ರೆ – ಜಿಮ್ಸ್‌ನಲ್ಲಿ, ಕರ್ನಾಟಕ ಅಸೋಸಿಯೇಶನ್ ಆಫ್ ಕಮ್ಯುನಿಟಿ ಹೆಲ್ತ್– 35ನೇ ವರ್ಷದ, ಕಚ್ಕಾನ್ ಸಮಾವೇಶ ಉದ್ಘಾಟಿಸಿ, ಮಾತನಾಡಿದರು. ಕಲಬುರಗಿಯಲ್ಲಿ, ಕಿದ್ವಾಯಿ ಆಸ್ಪತ್ರೆಯ ಪ್ರಾದೇಶಿಕ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ರಾಜ್ಯದಲ್ಲಿ 22 ವೈದ್ಯಕೀಯ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. 3 ಕಾಲೇಜುಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ, ಎಂದರು.**

<><><>

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಕೆ.ಎಸ್.ಆರ್.ಟಿ.ಸಿ, ಪ್ರತಿಷ್ಠಿತ ಎರಡು ಪ್ರಶಸ್ತಿಗಳಿಗೆ ಭಾಜನವಾಗಿದೆ. ಅಪೆಕ್ಸ್ ಇಂಡಿಯಾ ಮಾನವ ಸಂಪನ್ಮೂಲ ಶ್ರೇ ್ಠತೆ ಪ್ರಶಸ್ತಿ ಹಾಗೂ ನಿಗಮದ 2 ಸಾವಿರದ 600 ವಿವಿಧ ಹುದ್ದೆಗಳ ನೇಮಕಾತಿಯಲ್ಲಿ, ಪಾರದರ್ಶಕತೆ, ತಂತ್ರಜ್ಞಾನ ಆಧಾರಿತ ಪ್ರಕ್ರಿಯೆಗೆ, ಅಪೆಕ್ಸ್ ಇಂಡಿಯಾ ಮಾನವ ಸಂಪನ್ಮೂಲ ಧಾರಣಾ ಶ್ರೇ ್ಠತೆ, ಚಿನ್ನದ ಪ್ರಶಸ್ತಿ ಲಭಿಸಿದೆ. ರಾಜಸ್ಥಾನದ ಉದಯಪುರದಲ್ಲಿ ನಡೆದ, ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ, ಕೆ.ಎಸ್.ಆರ್.ಟಿ.ಸಿ ಮುಖ್ಯ**

ಭದ್ರತಾ ಮತ್ತು ಜಾಗೃತಾಧಿಕಾರಿ ಜಿ.ಎನ್. ಲಿಂಗರಾಜು ಹಾಗೂ ಮುಖ್ಯ ಸಂಚಾರ ವ್ಯವಸ್ಥಾಪಕ ಜೆ.ಅಂಥೋಣಿ ಜಾರ್ಜ್ ಪ್ರಶಸ್ತಿ ಸ್ವೀಕರಿಸಿದರು. ಸ್ಟೀಲ್ ಅಥಾರಿಟಿ ಆಫ್ ಇಂಡಿಯಾದ ಮಾಜಿ ಪ್ರಧಾನ ವ್ಯವಸ್ಥಾಪಕ, ಬಾಸಿನ್ ಹಾಗೂ ಮೇವಾರ್ ರಾಜವಂಶಸ್ಥೆ, ರಾಜಕುಮಾರಿ ಜಾನ್ಹವಿ ಕುಮಾರಿ ಅವರು ಪ್ರಶಸ್ತಿ ಪ್ರದಾನ ಮಾಡಿದರು.

<><><>

ಕೇಂದ್ರದ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆಗಳು, ಪಿಂಚಣಿ ಹಾಗೂ ಪಿಂಚಣಿದಾರರ ಯೋಗಕ್ಷೇಮ ಸಚಿವಾಲಯ, ಡಿಜಿಟಲ್ ಇಂಡಿಯಾ ಹಾಗೂ ಸುಗಮ ಜೀವನ ಯೋಜನೆ ಅಡಿ, ಪಿಂಚಣಿದಾರರ ಡಿಜಿಟಲ್ ಸಬಲೀಕರಣಕ್ಕಾಗಿ, ನಾಲ್ಕನೇ ಆವೃತ್ತಿಯ, ಡಿಜಿಟಲ್ ಜೀವಿತ ಪ್ರಮಾಣ ಪತ್ರ ಸಲ್ಲಿಕೆ, ವಿಶೇಷ ಅಭಿಯಾನವನ್ನು, ದೇಶಾದ್ಯಂತ ಈ ತಿಂಗಳ 30ರ ವರೆಗೆ ಆಯೋಜಿಸಿದೆ. ಧಾರವಾಡದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯಲ್ಲಿ, ಆಯೋಜಿತ ಡಿಜಿಟಲ್ ಲೈಫ್ ಸರ್ಟಿಫಿಕೇಟ್ ಸಲ್ಲಿಕೆ ಅಭಿಯಾನದಲ್ಲಿ ಪಾಲ್ಗೊಂಡಿದ್ದ, ಬ್ಯಾಂಕ್ ಸಿಬ್ಬಂದಿ ನಾರಾಯಣರಾವ್, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಧ್ವನಿ: ನಾರಾಯಣ ರಾವ್ – 29 ಸೆಕೆಂದುಗಳು

<><><>

ಬೆಳಗಾವಿಯ ಟಿಳಕವಾಡಿ ಕೆನರಾ ಬ್ಯಾಂಕ್ ಶಾಖೆಯಲ್ಲಿ, ಡಿಜಿಟಲ್ ಲೈಫ್ ಸರ್ಟಿಫಿಕೇಟ್ ಅಭಿಯಾನದ, ಅವಲೋಕನ ಸಭೆಗೆ, ಕೇಂದ್ರದ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆಗಳು, ಪಿಂಚಣಿ ಹಾಗೂ ಪಿಂಚಣಿದಾರರ ಯೋಗಕ್ಷೇಮ ಸಚಿವಾಲಯದ, ಅಧೀನ ಕಾರ್ಯದರ್ಶಿ ದೀಪಕ ಗುಪ್ತಾ, ಚಾಲನೆ ನೀಡಿದರು.

<><><>

ಬಳ್ಳಾರಿ ಜಿಲ್ಲೆಯಲ್ಲಿ, ಕೇಂದ್ರ ಹಣಕಾಸು ಸಚಿವಾಲಯ ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನದನ್ವಯ, 'ನಿಮ್ಮ ಹಣ; ನಿಮ್ಮ ಹಕ್ಕು' ಅಭಿಯಾನದ ಮೂಲಕ, ನಿಷ್ಕ್ರಿಯ ಬ್ಯಾಂಕ್ ಖಾತೆಗಳ ವಾರಸುದಾರರಿಗೆ, ಹಣ ಮರಳಿಸುವ ಕಾರ್ಯ, ಪ್ರಗತಿಯಲ್ಲಿದೆ. ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೈರ್ ಮಾಹಿತಿ ನೀಡಿ, ಜಿಲ್ಲೆಯಲ್ಲಿ ಕಾರ್ಯಾಚರಿಸುತ್ತಿರುವ, 23 ಬ್ಯಾಂಕುಗಳ, 186 ಶಾಖೆಗಳಲ್ಲಿ, 2 ಲಕ್ಷ 73 ಸಾವಿರದ, 484 ನಿಷ್ಕ್ರಿಯ ಖಾತೆಗಳಿವೆ. ಅವುಗಳಲ್ಲಿ 73 ಕೋಟಿ 54 ಲಕ್ಷ ರೂಪಾಯಿ ಹಣವಿದೆ. ಡಿಸೆಂಬರ್ ಅಂತ್ಯದೊಳಗೆ, 18 ಸಾವಿರದ 600 ಖಾತೆಗಳ ಹಕ್ಕು ಇತ್ಯರ್ಥ ಪಡಿಸುವ ಗುರಿ ಇದೆ ಎಂದರು.

<><><>

ಜಾತ್ಯತೀತ ಜನತಾ ದಳ, ರಜತ ಮಹೋತ್ಸವ ಸಂಭ್ರಮದಲ್ಲಿದೆ. ಜೆ.ಡಿ.ಎಸ್ ಪಕ್ಷದ, ಬೆಂಗಳೂರಿನ ಕಚೇರಿ, ಜೆ.ಪಿ ಭವನದಲ್ಲಿ ಆಯೋಜಿತ ಪಕ್ಷದ ರಾಷ್ಟ್ರೀಯ ಮಂಡಳಿ ಹಾಗೂ ಕಾರ್ಯಕಾರಿಣಿ ಸಭೆಗೆ, ಜೆ.ಡಿ.ಎಸ್. ರಾಷ್ಟ್ರೀಯ ವರಿಷ್ಠ ಎಚ್.ಡಿ ದೇವೇಗೌಡ ಅವರು, ಪಕ್ಷದ ಧ್ವಜಾರೋಹಣ ನೆರವೇರಿಸಿ, 25ನೇ ವರ್ಷದ ಸಂಭ್ರಮಾಚರಣೆಗೆ ಚಾಲನೆ ನೀಡಿದರು.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರಿಯುವುದು..

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ

<><><>

ದೇಶ ಸ್ವತಂತ್ರವಾದ ಬಳಿಕ, 500ಕ್ಕೂ ಹೆಚ್ಚು ಸಂಸ್ಥಾನಗಳು ಹಾಗೂ ಕಾಶ್ಮೀರವನ್ನು ಭಾರತಕ್ಕೆ ವಿಲೀನಗೊಳಿಸಿದ ಕೀರ್ತಿ, ಪ್ರಥಮ ಗೃಹ ಮಂತ್ರಿ, ಬಾರ್ಡೋಲಿಯ ಸರ್ದಾರ, ವಲ್ಲಭ ಭಾಯಿ ಪಟೇಲರಿಗೆ ಸಲ್ಲುತ್ತದೆ ಎಂದು, ಶಿವಮೊಗ್ಗ ಸಂಸದ ಬಿ.ವೈ. ರಾಘವೇಂದ್ರ ಹೇಳಿದ್ದಾರೆ. ಶಿವಮೊಗ್ಗದ ನೆಹರು ಕ್ರೀಡಾಂಗಣದಲ್ಲಿ, ಸರ್ದಾರ ಪಟೇಲರ 150ನೇ ಜಯಂತ್ಯುತ್ಸವದ ಅಂಗವಾಗಿ, ಏಕತಾ ನಡಿಗೆಗೆ ಗೋ ಪೂಜೆ ಮೂಲಕ ಚಾಲನೆ ನೀಡಿ, ಅವರು ಮಾತನಾಡಿದರು. ವಿಧಾನ ಪರಿ 'ತ್ ಸದಸ್ಯ ಧನಂಜಯ ಸರ್ಜಿ ಮಾತನಾಡಿ, 1928 ರಲ್ಲಿ ಗುಜರಾತಿನ ಬಾರ್ಡೋಲಿಯಲ್ಲಿ ನಡೆದ ರೈತ ಚಳವಳಿಯಲ್ಲಿ, ಪಟೇಲರ ನಾಯಕತ್ವವನ್ನು ಮೆಚ್ಚಿ, ಅಲ್ಲಿನ ರೈತರು, 'ಸರ್ದಾರ' ಬಿರುದು ನೀಡಿ, ಗೌರವಿಸಿದರು ಎಂದರು.

<><><>

ಧಾರವಾಡದ ಎಂ.ಎಂ. ಕಲಬುರ್ಗಿ ರಾಷ್ಟ್ರೀಯ ಪ್ರತಿಷ್ಠಾನದ, ಸಂಶೋಧನಾ ಪ್ರಶಸ್ತಿಗೆ, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಹಿರಿಯ ಸಂಶೋಧಕ ಪ್ರೊಫೆಸರ್ ಬಿ.ವಿ ಶಿರೂರ ಭಾಜನರಾಗಿದ್ದು, ಪ್ರಶಸ್ತಿ 50 ಸಾವಿರ ರೂಪಾಯಿ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ವಚನ ಸಂಗೀತ ಪ್ರಶಸ್ತಿಗೆ, ಧಾರವಾಡದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಕಲಾವಿದೆ, ವಿದುಷಿ ಸುಜಾತಾ ಗುರವ ಕಮ್ಮಾರ ಭಾಜನರಾಗಿದ್ದಾರೆ. ಪ್ರಶಸ್ತಿ 25 ಸಾವಿರ ರೂಪಾಯಿ ನಗದು ಪುರಸ್ಕಾರ ಹಾಗೂ ಸ್ಮರಣಿಕೆ ಒಳಗೊಂಡಿದೆ. 28ನೇ ತಾರೀಖು ಶುಕ್ರವಾರ ಸಂಜೆ 5 ಗಂಟೆಗೆ, ಧಾರವಾಡದ ಆಲೂರು ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ, ಹಿರಿಯ ವಿದ್ವಾಂಸ, ಹಂ.ಪ. ನಾಗರಾಜಯ್ಯ, ಪುರಸ್ಕಾರಗಳನ್ನು ಪ್ರದಾನಿಸಿ, ಗೌರವಿಸಲಿದ್ದಾರೆ. ಸಂಶೋಧನಾ ಪ್ರಶಸ್ತಿಗೆ ಭಾಜನರಾದ, ಬಿ.ವಿ ಶಿರೂರ ಅವರು, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಪ್ರೊ. ಬಿ.ವಿ ಶಿರೂರ ಧ್ವನಿ 51 ಸೆಕೆಂಡುಗಳು

<><><>

ಬೆಂಗಳೂರು ಕಂಟೋನ್ಮೆಂಟ್ ಮತ್ತು ಕಲಬುರಗಿ ನಡುವೆ, ವಾರಾಂತ್ಯಗಳಲ್ಲಿ ಪ್ರಯಾಣಿಕರ ನಿರೀಕ್ಷಿತ ಹೆಚ್ಚುವರಿ ದಟ್ಟಣೆ ನಿರ್ವಹಿಸಲು, ನೈಋತ್ಯ ರೇಲ್ವೆ, ಆರು ಟ್ರಿಪ್‌ಗಳ ವಿಶೇ ' ಎಕ್ಸ್‌ಪ್ರೆಸ್ ರೈಲುಗಳನ್ನು ಓಡಿಸಲಿದೆ. ಬೆಂಗಳೂರು ಕಂಟೋನ್ಮೆಂಟ್ – ಕಲಬುರಗಿ ವಿಶೇ ' ಎಕ್ಸ್‌ಪ್ರೆಸ್ ರೈಲು, ಇಂದಿನಿಂದ, ಡಿಸೆಂಬರ್ 27 ರ ವರೆಗೆ, ಪ್ರತಿ ಶನಿವಾರ ರಾತ್ರಿ 7:20 ಕ್ಕೆ ಬೆಂಗಳೂರು ಕಂಟೋನ್ಮೆಂಟ್ ನಿಂದ ಹೊರಟು, ಭಾನುವಾರ ಬೆಳಗ್ಗೆ 7:30 ಕ್ಕೆ ಕಲಬುರಗಿ ತಲುಪಲಿದೆ. ಕಲಬುರಗಿ –ಬೆಂಗಳೂರು ಕಂಟೋನ್ಮೆಂಟ್ ವಿಶೇ ' ಎಕ್ಸ್‌ಪ್ರೆಸ್ ರೈಲು, ನಾಳೆ ಭಾನುವಾರದಿಂದ, ಡಿಸೆಂಬರ್ 28ರ ವರೆಗೆ, ಪ್ರತಿ ಭಾನುವಾರ ದಂದು ಬೆಳಗ್ಗೆ 9:35ಕ್ಕೆ ಕಲಬುರಗಿಯಿಂದ ಹೊರಟು, ಅದೇ ದಿನ ರಾತ್ರಿ 8:30ಕ್ಕೆ ಬೆಂಗಳೂರು ಕಂಟೋನ್ಮೆಂಟ್ ತಲುಪಲಿದೆ. ಈ ತಿಂಗಳ 24 ರಿಂದ ಹುಬ್ಬಳ್ಳಿ–ಪುಣೆ ಟ್ರೈ ವೀಕ್ಲಿ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು, ಕಿರ್ಲೋಸ್ಕರವಾಡಿ ನಿಲ್ದಾಣದಲ್ಲಿ ನಿಲುಗಡೆಯಾಗಲಿದೆ ಎಂದು ಸೆಂಟ್ರಲ್ ರೇಲ್ವೆ ತಿಳಿಸಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ಕಲಬುರಗಿ ಜಿಲ್ಲೆಯನ್ನು, ಕಲ್ಯಾಣ ಕರ್ನಾಟಕದ, ಆರೋಗ್ಯ ತಾಣವಾಗಿ ರೂಪಿಸಲು, ರಾಜ್ಯ ಸರ್ಕಾರದ, ಯೋಜನೆ.

ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ, ರಾಷ್ಟ್ರೀಯ ಪ್ರಶಸ್ತಿಗಳ ಗರಿ.

ಪಿಂಚಣಿದಾರರ, ಡಿಜಿಟಲ್ ಜೀವಿತ ಪ್ರಮಾಣ ಪತ್ರ ಅಭಿಯಾನ; ಈ ತಿಂಗಳ 30ರ ವರೆಗೆ ಸಲ್ಲಿಕೆಗೆ, ಅವಕಾಶ.

ಸರ್ದಾರ ಪಟೇಲರ 150ನೇ ಜಯಂತ್ಯುತ್ಸವ; ಶಿವಮೊಗ್ಗದಲ್ಲಿ ಏಕತಾ ನಡಿಗೆ ಯಶಸ್ವಿ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ

<><><>